ಕೊರಳಿಗೆಂದೋ ಅಜ್ಜನೋ ಅಜ್ಜಿಯೋ ತೆಗೆಸಿಕೊಟ್ಟ ಸಣ್ಣಪುಟ್ಟ ಆಭರಣ, ಮಗು ಮತ್ತು ತಾಯಿಯ ಬಟ್ಟೆಗಳು, ಮತ್ತೂ ಒಂದಷ್ಟು ವಸ್ತುಗಳು – ಇವುಗಳನ್ನೆಲ್ಲ ಹುದುಗಿಸಿಕೊಂಡ ಟ್ರಂಕು ಆ ಹೆಣ್ಣುಮಗಳ ಜೊತೆಗೆ ಇರಬೇಕಲ್ಲವೇ? ಆಕೆಯ ತಲೆಯ ಮೇಲೆ ಟ್ರಂಕು ಇರದಿದ್ದರೇನಾಯಿತು – ಟ್ರಂಕನ್ನು ಹೊತ್ತ ಸೋದರನೋ ಸಂಬಂಧಿಕನೋ ಅವಳ ಜೊತೆ ಇರಲೇಬೇಕು! ಹೆರಿಗೆ ಮುಗಿಸಿಕೊಂಡು ಗಂಡನಮನೆಗೆ ಹೊರಟ ಹೆಣ್ಣಿನ ಚಿತ್ರದಲ್ಲಿ ಜನಪದ ಕವಿ ಟ್ರಂಕನ್ನು ಮರೆತದ್ದು ಆಶ್ಚರ್ಯವೇ! ಅಥವಾ ಆ ಟ್ರಂಕು ಯಾರ ಮೂಲಕವೋ ಈಗಾಗಲೇ ತನ್ನ ಗುರಿ ಮುಟ್ಟಿರಬೇಕು. ಒಂದಂತೂ ನಿಜ, ಟ್ರಂಕಿಲ್ಲದೆ ಆಕೆ ತವರುಮನೆಗೆ ಹೋಗಿರಲಾರಳು, ಗಂಡನಮನೆಗೆ ಹಿಂತಿರುಗಿರಲಾರಳು. ಅಂಕೋಲೆಯ ಹಾಲಕ್ಕಿ ಒಕ್ಕಲಿಗರಲ್ಲಿ ಮದುವೆಯಾದ ನವವಧು ಗಂಡನ ಮನೆಗೆ ತೆರಳುವಾಗ ಅವಳಿಗೆ ನೀಡುವ ಕಡ್ಡಾಯ ಉಡುಗೊರೆಗಳಲ್ಲಿ ಟ್ರಂಕು ಹಾಗೂ ತೆಂಗಿನಸಸಿ ಇರುವುದು, ಟ್ರಂಕು ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿರುವುದನ್ನು ಸೂಚಿಸುವಂತಿದೆ.

ನಾಜೂಕು ಸೂಟ್‌ಕೇಸ್‌ಗಳು ಹಾಗೂ ಕಬ್ಬಿಣದ ಬೀರುಗಳು(ಅಲ್ಮೇರಾಗಳು) ಈಗ ಟ್ರಂಕುಗಳನ್ನು ಅಟ್ಟಕ್ಕೆ ಹತ್ತಿಸಿರಬಹುದು. ಪ್ಲೈವುಡ್‌ನಿಂದ ರೂಪಿಸಲಾಗುವ ಕಬೋರ್ಡ್‌ಗಳು ಗೋಡೆಯುದ್ದಕ್ಕೂ ಅನಾವರಣಗೊಂಡಿರಬಹುದು. ಆದರೆ, ಟ್ರಂಕಿಗೆ ಇರುವ ಘನತೆ ಬೇರೆ ಯಾವುದಕ್ಕೂ ಇಲ್ಲ. ಅಂಥ ಘನತೆಯನ್ನು ಎತ್ತಿಹಿಡಿಯುವ ಮತ್ತೊಂದು ಕಥೆ ಮುನಿಯಪ್ಪನದು. ಡಾ. ಆಶಾ ಬೆನಕಪ್ಪನವರು ತಮ್ಮ ಬರಹವೊಂದರಲ್ಲಿ ಕಾಣಿಸುವ ಮುನಿಯಪ್ಪನ ಟ್ರಂಕು, ಟ್ರಂಕಿನ ಕುರಿತ ನಮ್ಮ ಕಲ್ಪನೆಗಳನ್ನು ಬುಡಮೇಲು ಮಾಡುವಂತಿದೆ. ಅಂತಿಮವಾಗಿ, ಮನುಷ್ಯನ ಆತ್ಮಾಭಿಮಾನವನ್ನು ಪೊರೆಯುವ ಟ್ರಂಕಿನ ಘನತೆಯನ್ನು ಕುರಿತು ಹೇಳುವ ಆಶಾ ಬೆನಕಪ್ಪನವರ – 'ಬಡವರಿಗೆ ಬದುಕು ತುಟ್ಟಿ; ಸಾವು ಇನ್ನೂ ತುಟ್ಟಿ!' ಎನ್ನುವ ಅನುಭವ ಕಥನ ನಮ್ಮ ಹೃದಯದ ಟ್ರಂಕಿನ ಬಾಗಿಲನ್ನೇ ತೆರೆಸುವಷ್ಟು ಆರ್ದ್ರವಾದುದು. ಕಥೆಯೆಂದುಕೊಂಡು ಓದಿದರೂ ಮನಸ್ಸು ತಲ್ಲಣಿಸುವಂತಿರುವ ಅದು ಹೀಗಿದೆ:

"ಹದಿನಾಲ್ಕು ವರ್ಷದ ಹನುಮಂತಪ್ಪ ಎಂಬ ಹುಡುಗನನ್ನು ಬೆಂಗಳೂರಿನ ವಾಣಿ ವಿಲಾಸ ಆಸ್ಪತ್ರೆಗೆ ಚಿಕಿತ್ಸೆಗೆಂದು ಕರೆತರಲಾಯಿತು. ಕೊಪ್ಪಳದ ಬಡರೈತ ಮುನಿಯಪ್ಪನವರ ಮಗ ಈ ಹನುಮಂತಪ್ಪ. ಕಳೆದ ಐದು ವರ್ಷಗಳಿಂದ ಹನುಮಂತಪ್ಪ ಹೃದ್ರೋಗದಿಂದ ಬಳಲುತ್ತಿದ್ದ. ಇದ್ದ ಕೆಲವು ಗುಂಟೆ ಜಮೀನನ್ನು ಮಾರಿ ಅವರು ಹಣ ಹೊಂದಿಸಿಕೊಂಡು ಮಗನನ್ನು ಜಯದೇವ ಹೃದ್ರೋಗ ಚಿಕಿತ್ಸಾಕೇಂದ್ರಕ್ಕೆ ಕರೆತಂದರು. 'ಹೃದ್ರೋಗ ಶಸ್ತ್ರಚಿಕಿತ್ಸೆಯಿಂದ ರೋಗ ಗುಣವಾಗುವ ಸ್ಥಿತಿ ಮೀರಿದೆ. ಹುಡುಗ ಇನ್ನು ಕೆಲವೇ ದಿನ ಬದುಕಿರುತ್ತಾನೆ' ಎಂದು ವೈದ್ಯರು ಹೇಳಿದರು. ಆಗ ಹನುಮಂತಪ್ಪ ವಾಣಿ ವಿಲಾಸ ಆಸ್ಪತ್ರೆಯಲ್ಲಿ ನಾನು ಕೆಲಸ ಮಾಡುತ್ತಿದ್ದ ಘಟಕಕ್ಕೆ ಬಂದರು. ಅಲ್ಲಿ ಅಪ್ಪ–ಮಗ ನಮ್ಮೊಟ್ಟಿಗೆ ಮೂರು ವಾರ ಇದ್ದರು.

ಮುನಿಯಪ್ಪ ಪತ್ನಿಯನ್ನು ಕಳೆದುಕೊಂಡಿದ್ದರೂ ಮತ್ತೊಂದು ಮದುವೆ ಆಗಿರಲಿಲ್ಲ. ಗೋಣಿಚೀಲದಲ್ಲಿ ಒಂದಿಷ್ಟು ರಾಗಿ, ಸ್ವಲ್ಪ ಸೀಮೆಎಣ್ಣೆ, ಒಂದು ಸ್ಟೋವ್ ಮತ್ತಿತರ ವಸ್ತುಗಳನ್ನು ತಂದಿದ್ದರು. ಆಸ್ಪತ್ರೆಯಲ್ಲಿ ಇರುವ ಅಷ್ಟೂ ದಿನ ತಾವೇ ಅಡುಗೆ ಮಾಡಿಕೊಳ್ಳುತ್ತಿದ್ದರು. ಮಗನಿಗೆ ಆಸ್ಪತ್ರೆಯವರೇ ಊಟ ಕೊಡುತ್ತಿದ್ದುದರಿಂದ ಸಮಸ್ಯೆ ಇರಲಿಲ್ಲ. ಮಗನ ಆರೋಗ್ಯಕ್ಕೆ ಸಂಬಂಧಪಟ್ಟ ಪರೀಕ್ಷೆಗಳನ್ನು ಮಾಡಿಸಲು ಮುನಿಯಪ್ಪ ಅಲ್ಲಿಂದಿಲ್ಲಿಗೆ ಓಡಾಡುತ್ತಿದ್ದರು. ಸೊಂಟಕ್ಕೆ ಸುತ್ತಿಕೊಂಡಿದ್ದ ಪಟ್ಟಿಯಲ್ಲಿ ತಾವು ಕಷ್ಟಪಟ್ಟು ಹೊಂದಿಸಿದ ಹಣ